**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಬಾಗೇಪಲ್ಲಿ**

ಸಿ.ಸಿ. 541/2023

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಆಂಜಿನಮ್ಮ | ಸಿಡಬ್ಲೂಃ**5** |
| ಗಂಡನ ಹೆಸರು | ಃ | ಅಂಜಿನಪ್ಪ | ಪಿಡಬ್ಲೂಃ **3** |
| ವಯಸ್ಸು | ಃ | 35 ವರ್ಷ | ಪ್ರಮಾಣೀಕರಿಸಲಾದ ದಿನಾಂಕ |
| ವೃತ್ತಿ | ಃ | ವ್ಯವಸಾಯ | 02.07.2026. |
| ವಾಸ ಸ್ಥಳ | ಃ | ಅಬಕವಾರಿಪಲ್ಲಿ ಗ್ರಾಮ | |

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ**

ಚಾಸಾ.4 ನನ್ನ ಗಂಡ, ಚಾಸಾ-1 ನನ್ನ ಮೈದುನ , ಚಾಸಾ-6 ನನ್ನ ಮಗ, ಚಾಸಾ-2 ಮತ್ತು 3 ಚಾಸಾ-7 ರಿಂದ 9 ರವರು ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಗಳು ನನ್ನ ಸಂಬಂಧಿಕರು.

ಆರೋಪಿತರು ನನಗಾಲೀ ಅಥವಾ ಚಾಸಾ-1,4 ಮತ್ತು 6 ರವರಿಗಾಗಲೀ ಯಾವತ್ತೂ ಕೈಗಳಿಂದ ಅಥವಾ ಮಚ್ಚಿನಿಂದಾಗಲೀ ಮತ್ತು ದೊಣ್ಣೆಯಿಂದಾಗಲೀ ಹೊಡೆದು ಹಲ್ಲೆ ಮಾಡಿರುವುದಿಲ್ಲ ಮತ್ತು ಬಾಯಿಂದ ಕಚ್ಚಿರುವುದಿಲ್ಲ. ನನಗಾಗಲಿ ಅಥವಾ ಚಾಸಾ-1,4 ಮತ್ತು 6 ರವರಿಗಾಗಲೀ ಅವಾಚ್ಯ ಶಬ್ಧಗಳಿಂದ ಬೈದಿರುವುದಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿರುವುದಿಲ್ಲ. ಈ ಕುರಿತು ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ.

**(ಮಾನ್ಯ ಸ.ಸಅ.ರವರು ಸಾಕ್ಷಿಯನ್ನು ಪ್ರತಿಕೂಲವೆಂದು ಪರಿಗಣಿಸಿದ್ದು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ**

ದಿನಾಂಕ 14.02.2023 ರಂದು ಮಧ್ಯಾಹ್ನ 03.00 ಗಂಟೆ ಸಮಯದಲ್ಲಿ 1 ಮತ್ತು 2 ನೇ ಆರೋಪಿತರು ನಾನು ತಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿದಾಗ, ಹಳೆಯ ದ್ವೇಶದಿಂದ ನನ್ನ ಮೇಲೆ ಗಲಾಟೆ ಮಾಡಿರುತ್ತಾರೆ. ನಂತರ ಆದೇ ದಿನ ಸಂಜೆ 6.00 ಸಮಯದಲ್ಲಿ 1 ನೇ ಆರೋಪಿರವರ ಮನೆಗೆ ನಾನು ಮತ್ತು ಚಾಸಾ-**1,4** ಮತ್ತು **6** ರವರು ಹೋಗಿ 1 ನೇ ಆರೋಪಿಯನ್ನು ಕರೆದು ಏಕೆ ಗಲಾಟೆ ಮಾಡಿದ್ದು ಎಂದು ಕೇಳಿದ್ದಾಗೆ, ನಮ್ಮ ಮೇಲೆ ಜಗಳ

ಮಾಡಿ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ಮಚ್ಚಿನಿಂದ ಚಾಸಾ-6 ರವರು ಎಡ ಕೈ, ಮೊಣ ಕೈ ಗೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಆರೋಪಿಯು ಚಾಸಾ-2 ರವರಿಗೆ ಕೈಗಳಿಂದ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಜಗಳ ಬಿಡಿಸಲು ಹೋದಾಗ, 1 ನೇ ಆರೋಪಿಯು ಚಾಸಾ-1 ರವರ ಮೈ ಮೇಲೆ ಹೊಡೆದು ಬಾಯಿಯಿಂದ ಎದಗೆ ಕಚ್ಚಿರುತ್ತಾರೆ ಎಂದರೆ ಸರಿಯಲ್ಲ. 4 ನೇ ಆರೋಪಿಯು ದೊಣ್ಣೆಯಿಂದ ಚಾಸಾ-4 ರವರ ತಲೆಗೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. 3 ನೇ ಆರೋಪಿಯು ಚಾಸಾ-1 ರವರಿಗೆ ಕೈಗಳಿಂದ ಮೈ ಮೇಲೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮನ್ನು ಕುರಿತು ಪ್ರಾಣ ಸಹಿತ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-7 ರಿಂದ 9 ರವರು ಬಂದು ಜಗಳ ಬಿಡಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ಸಾಕ್ಷಿಯು ಒಪ್ಪದಿದ್ದ ಕಾರಣ ನಿಪಿ-4 ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸುತ್ತಿರುವ ಮಚ್ಚು ಮತ್ತು ದೊಣ್ಣೆಯಿಂದಲೇ ನನ ಮೇಲೆ ಮತ್ತು ಚಾಸಾ-**1,4** ಮತ್ತು **6** ರವರಿಗೆ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನಾನು ಮತ್ತು ಆರೋಪಿತರು ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿ. ಹಾಗಾಗಿ ಈಗ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಪಾಟೀ ಸವಾಲು ಇಲ್ಲ**

**ಮರು ವಿಚಾರಣೆ ಇಲ್ಲಃ**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಬಾಗೇಪಲ್ಲಿ .